ನಿರ್ಮಾಣವಾಗಿರುವುದರಿಂದ ಮಳೆಗಾಲದಲ್ಲಿ ಲಭ್ಯವಾಗುವ ಹೆಚ್ಚುವರಿ ನೀರನ್ನು ನದಿಯಿಂದ 2 ಸಂಖ್ಯೆಯ 40 ಹೆಚ್.ಪಿ. ಪಂಪುಗಳನ್ನು ಸ್ಥಾಪಿಸಿ 2.86 ಕ್ಯೂಸೆಕ್ಸ್ ನೀರನ್ನು 1.00 ಕಿ.ಮೀ. ರೈಸಿಂಗ್ ಪೈಪ್ ಮುಖಾಂತರ ಎತ್ತಿ 1.50 ಕಿ.ಮೀ. ಫೀಡರ್ ಕಾಲುವೆ ಮುಖಾಂತರ ಬಂಡೀಹಳ್ಳಿ ಕೆರೆಗೆ ಹರಿಸಲು ಕ್ರಮಕೈಗೊಳ್ಳಲು ಉದ್ದೇಶಿಸಲಾಗಿದೆ.

ಆ) ಈ ಯೋಜನೆಯನ್ನು ಪುನಶ್ಚೇತನಗೊಳಿಸುವ ದೃಷ್ಟಿಯಿಂದ ಅಂದಾಜನ್ನು ತಯಾರಿಸಲು ಕಾವೇರಿ ನೀರಾವರಿ ನಿಗಮವು ಕಾರ್ಯಪ್ರವೃತ್ತವಾಗಿದ್ದು, ಕಾವೇರಿ ನೀರಾವರಿ ನಿಗಮದ ತಾಂತ್ರಿಕ ಉಪಸಮಿತಿ ಮತ್ತು ಮಂಡಳಿಯ ಅನುಮೋದನೆ ಪಡೆದು ಈ ಸಾಲಿನಲ್ಲಿ ಯೋಜನೆಯನ್ನು ಕೈಗೊಳ್ಳಲು ಉದ್ದೇಶಿಲಾಗಿದೆ.

ಮಾರ್ಕೋನಹಳ್ಳಿ ಜಲಾಶಯ

43 (117) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನಲ್ಲಿನ ಮಾರ್ಕೋನಹಳ್ಳಿ ಜಲಾಶಯದಿಂದ ಮಂಗಳ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಕಾಲುವೆ ನಿರ್ಮಾಣ ಮಾಡುವ ಕಾಮಗಾರಿಯನ್ನು ಪ್ರಾರಂಭಿಸಲು ವಿಳಂಬ ಮಾಡುತ್ತಿರುವುದಕ್ಕೆ ಕಾರಣಗಳೇನು;

ಆ) ಹಾಗಿದ್ದಲ್ಲಿ, ಕಾಮಗಾರಿಗಳನ್ನು ಸರ್ಕಾರ ಎಂದು ಪ್ರಾರಂಭಿಸಲಾಗುವುದು?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ತುಮಕೂರು ಜಿಲ್ಲೆಯ ಕುಣಿಗಲ್ ತಾಲ್ಲೂಕಿನ ಮಾರ್ಕೋನಹಳ್ಳಿ ಜಲಾಶಯದಿಂದ ಮಂಗಳ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಮಾಡುವ ಪ್ರಸ್ತಾವನೆಯ ಬಗ್ಗೆ ಕಾವೇರಿ ನೀರಾವರಿ ನಿಗಮದ ಪರಿಶೀಲನೆಯಲ್ಲಿದೆ.

ಮಾರ್ಕೋನಹಳ್ಳಿ ಜಲಾಶಯವನ್ನು ಶಿಂಷಾ ನದಿಗೆ ಅಡ್ಡಲಾಗಿ ನಿರ್ಮಿಸಿದ್ದು, ಜಲಾಶಯವು 5942 ಹೆ. ಅಚ್ಚುಕಟ್ಟು ಪ್ರದೇಶವನ್ನು ಹೊಂದಿರುತ್ತದೆ. ಪ್ರಸ್ತುತ ಹೇಮಾವತಿ ಯೋಜನೆಯಿಂದ ನೀರು ಹರಿಸುತ್ತಿರುವುದರಿಂದ ಸೀಪೇಜ್ ನೀರು ಶಿಂಷಾ ವ್ಯಾಲಿಯ ಮೂಲಕ ಮಾರ್ಕೋನಹಳ್ಳಿ ಜಲಾಶಯಕ್ಕೆ ಬಂದು ಸೇರುತ್ತಿರುವುದರಿಂದ ಅಚ್ಚುಕಟ್ಟಿಗೆ ಯಾವುದೇ ವ್ಯತ್ಯಯವಿಲ್ಲದಂತೆ ನೀರು ಪೂರೈಕೆಯಾಗುತ್ತಿರುತ್ತದೆ.

ಮಂಗಳ ಜಲಾಶಯವನ್ನು ನಾಗಿನಿ ನದಿಗೆ ಅಡ್ಡಲಾಗಿ ನಿರ್ಮಿಸಿದ್ದು, ಜಲಾಶಯವು

1636 ಹೆ. ಅಚ್ಚುಕಟ್ಟು ಪ್ರದೇಶ ಹೊಂಮದಿರುತ್ತದೆ. ಪ್ರಸ್ತುತ ಹೇಮಾವತಿ ನಾಲೆಯ ಶಾಖಾ ನಾಲೆಯಾದ ತುಮಕೂರು ಶಾಖಾ ನಾಲೆಯ ವ್ಯಾಪ್ತಿಯಲ್ಲಿ ಬರುವ ಕುಣಿಗಲ್ ಕೆರೆಯ ಹೆಚ್ಚುವರಿ ನೀರು ಮಂಗಳಾ ಜಲಶಯಕ್ಕೆ ಸೇರುತ್ತದೆ.

ಈ ಎರಡೂ ಜಲಾಶಯಗಳು ಜಲ ಮೂಲದ ಕೊರತೆ ಅನುಭವಿಸುತ್ತಿದ್ದು, ತುಮಕೂರು ಶಾಖಾ ನಾಲೆ ಹಾಗೂ ನಾಗಮಂಗಲ ಶಾಖಾ ನಾಲೆಯ ಅಚ್ಚುಕಟ್ಟಿನ ಸೀಪೇಜ್ ನೀರಿನಿಂದಾಗಿ ಈ ಕೊರತೆಯನ್ನು ಸರಿದೂಗಿಸಿಕೊಳ್ಳುತ್ತಿವೆ.

ಆದ್ದರಿಂದ, ಮಾರ್ಕೋನಹಳ್ಳೀ ಜಲಾಶಯದಿಂದ ಮಂಗಳಾ ಜಲಾಶಯಕ್ಕೆ ಹಿನ್ನೀರಿನ ಸಂಪರ್ಕ ಕಾಲುವೆ ನಿರ್ಮಾಣ ಮಾಡುವ ಪ್ರಸ್ತಾವನೆಯನ್ನು ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಪೂರ್ಣಪ್ರಮಾಣದ ಬಳಕೆಯ ಅನುಷ್ಠಾನವಾದ ನಂತರವೇ ಪರಿಗಣಿಸಬೇಕಾಗುತ್ತದೆ.

ಆ) ನೀರಿನ ಲಭ್ಯತೆ ಹಾಗೂ ತಾಂತ್ರಿಕ ಸಾಧ್ಯ ಸಾಧ್ಯತೆಗಳನ್ನು ಪರಿಶೀಲಿಸಿ, ಈ ಕಾಲುವೆ ನಿರ್ಮಿಸುವ ಬಗ್ಗೆ ಪರಿಶೀಲಿಸಲಾಗುವುದು.

ಹೇಮಾವತಿ ನಾಲಾ

44 (118) ಶ್ರೀ ಬಿ. ಬಿ. ರಾಮಸ್ವಾಮಿ ಗೌಡ (ಕುಣಿಗಲ್):– ಮಾನ್ಯ ಜಲಸಂಪನ್ಮೂಲಗಳ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಕುಣಿಗಲ್ ತಾಲ್ಲೂಕಿನಲ್ಲಿ ಪ್ರಗತಿ ಹಂತದಲ್ಲಿರುವ ಹೇಮಾವತಿ ಮುಖ್ಯ ನಾಲಾ ನಿರ್ಮಾಣ ಕಾಮಗಾರಿಗಳ ಪೈಕಿ 189–190 ಕಿ.ಮೀ. ಮಧ್ಯದ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಇರುವ ಸಮಸ್ಯೆಗಳನ್ನು ಪರಿಹರಿಸಿ, ಕಾಮಗಾರಿಗಳನ್ನು ಪುನರ್ ಪ್ರಾರಂಭಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲಗಳ ಸಚಿವರು):–

ಅ) ಕುಣಿಗಲ್ ತಾಲ್ಲೂಕಿನಲ್ಲಿ ಪ್ರಗತಿ ಹಂತದಲ್ಲಿರುವ ಹೇಮಾವತಿ ಮುಖ್ಯ ನಾಲಾ ನಿರ್ಮಾಣ ಕಾಮಗಾರಿಗಳ ಪೈಕಿ 189–190 ಕಿ.ಮೀ. ಮಧ್ಯದ ಕಾಮಗಾರಿಗಳು ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಆ) ಈ ಕಿ.ಮೀ. ಗಳ ಭೂಸ್ವಾಧೀನ ಅಧಿಸೂಚನೆ ಬಗ್ಗೆ ಕೆಲವು ರೈತರು ಸರ್ಕಾರದ